## ಗ್ಯಾಸೆಟಿಯರ್ ಇಲಾಖೆಯ ಪ್ರಕಟಣೆಗಳು

| ಪುಸ್ತಕದ ಹೆಸರು | ವರ್ಷ | ಬೆಲೆ ರೂ. |
|---|---|---|
| ಧಾರವಾಡ | 1959 | – |
| ಕೂರ್ಗ್ | 1965 | – |
| ಬಿಜಾಪುರ | 1966 | 15 |
| ಗುಲಬರ್ಗ | 1967 | 15 |
| ಚಿತ್ರದುರ್ಗ | 1967 | – |
| ಮಂಡ್ಯ | 1968 | – |
| ಕೋಲಾರ | 1968 | 20 |
| ತುಮಕೂರು | 1969 | – |
| ರಾಯಚೂರು | 1970 | 30 |
| ಹಾಸನ | 1971 | 40 |
| ಬಳ್ಳಾರಿ | 1972 | 42 |
| ದಕ್ಷಿಣ ಕನ್ನಡ | 1973 | – |
| ಶಿವಮೊಗ್ಗ | 1976 | – |
| ಬೀದರ್ | 1977 | 61 |
| ಚಿಕ್ಕಮಗಳೂರು | 1981 | – |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಆಂಗ್ಲ ಆವೃತ್ತಿ) | | 120 |
| ಭಾಗ–1 | 1982 | |
| ಭಾಗ–2 | 1983 | |
| ಕರ್ನಾಟಕ ರಾಜ್ಯ ಗ್ಯಾಸೆಟಿಯರ್ (ಕನ್ನಡ ಆವೃತ್ತಿ) | | 120 |
| ಭಾಗ–1 | 1984 | |
| ಭಾಗ–2 | 1985 | |
| ಭಾಗ–3 | 1986 | |
| ಉತ್ತರ ಕನ್ನಡ | 1985 | 75 |
| ಬೆಳಗಾಂ | 1987 | 75 |
| ಮೈಸೂರು | 1988 | 75 |
| ಬೆಂಗಳೂರು ಗ್ರಾಮಾಂತರ | 1989 | 75 |
| ಬೆಂಗಳೂರು | 1990 | 100 |
| ಕೊಡಗು (ಕನ್ನಡ) | 1992 | 100 |
| ಕೊಡಗು (ಆಂಗ್ಲ) | 1993 | – |
| ದಶವಾರ್ಷಿಕ ಪುರವಣಿ (ಆಂಗ್ಲ) | 1994 | 130 |
| ಧಾರವಾಡ (ಕನ್ನಡ) | 1995 | 175 |
| ಕರ್ನಾಟಕ ಕೈಪಿಡಿ (ಆಂಗ್ಲ) | 1996 | 100 |
| ದಶವಾರ್ಷಿಕ ಪುರವಣಿ (ಕನ್ನಡ) | 1996 | 181 |
| ಕರ್ನಾಟಕ ಕೈಪಿಡಿ (ಕನ್ನಡ) | 1996 | 116 |
| ಗುಲಬರ್ಗ (ಕನ್ನಡ) | 1997 | 200 |
| ಬಿಜಾಪುರ (ಕನ್ನಡ) | 1999 | 242 |
| ಕರ್ನಾಟಕ ಕೈಪಿಡಿ (ಪುನರ್ ಮುದ್ರಣ) | 2001 | 160 |
| ಬಿಜಾಪುರ (ಸಂ. ಜೇಮ್ಸ್ ಎಂ. ಕ್ಯಾಂಬೆಲ್) 1884ರ ಪುನರ್ ಮುದ್ರಣ | 2001 | 330 |
| ಧಾರವಾಡ (ಆಂಗ್ಲ) | 2003 | 350 |
| ಮಂಡ್ಯ (ಕನ್ನಡ) | 2003 | 250 |
| ದಕ್ಷಿಣ ಕನ್ನಡ (ಸ್ಟುರೋಕ್) 1884 ರ ಪುನರ್ ಮುದ್ರಣ | 2003 | 170 |
| ಕೆನರಾ (ಸಂ. ಜೇಮ್ಸ್ ಕ್ಯಾಂಪೆಲ್) 1884ರ ಪುನರ್ ಮುದ್ರಣ | 2003 | 250 |
| ಧಾರವಾಡ (ಸಂ. ಜೇಮ್ಸ್ ಎಂ. ಕ್ಯಾಂಬೆಲ್) 1884ರ ಪುನರ್ ಮುದ್ರಣ | 2003 | 235 |
| ಬೆಳಗಾಂ (ಸಂ. ಜೇಮ್ ಕ್ಯಾಂಪೆಲ್) 1884ರ ಪುನರ್ ಮುದ್ರಣ | 2004 | 250 |
| ಮೈಸೂರು ಭಾಗ –1 (ಬಿ.ಎಲ್. ರೈಸ್) 1898ರ ಮುನರ್ ಮುದ್ರಣ | 2004 | 815 |
| ಮೈಸೂರು ಭಾಗ –2 (ಸಂ. ಬಿ.ಎಲ್. ರೈಸ್) 1898ರ ಮುನರ್ ಮುದ್ರಣ | 2004 | |
| ಮೈಸೂರು ಮತ್ತು ಕೊಡಗು ಭಾಗ : 3 (ಸಂ. ಬಿ.ಎಲ್. ರೈಸ್) 1878ರ ಮುನರ್ ಮುದ್ರಣ | 2004 | |
| ಬಳ್ಳಾರಿ (ಸಂ. ಕೆಲ್‌ಸಾಲ್/ ಡಬ್ಲ್ಯೂ ಫ್ರಾನ್ಸಿಸ್) 1872/ 1904 ಪುನರ್ ಮುದ್ರಣ | 2004 | 160 |
| ಗುಲಬರ್ಗ (ಆಂಗ್ಲ) | 2005 | 450 |
| ಕೋಲಾರ (ಕನ್ನಡ) | 2005 | 280 |
| ಬಿಜಾಪುರ (ಆಂಗ್ಲ) | 2007 | 520 |
| ಮಂಡ್ಯ (ಆಂಗ್ಲ) | 2009 | 700 |
| ದಕ್ಷಿಣ ಕನ್ನಡ (ಕನ್ನಡ) | 2007 | 290 |
| ಕರ್ನಾಟಕ ಕೈಪಿಡಿ (ಕನ್ನಡ) | 2010 | 350 |
| ಉಡುಪಿ (ಕನ್ನಡ) | 2010 | 422 |
| ದಕ್ಷಿಣ ಕನ್ನಡ (ಆಂಗ್ಲ) | 2011 | 880 |
| A Journey from Madras through the countries of Mysore,Canara and Malabar(Reprint) by Francis Buchanan- three volumes | 2010 | 1230 |
| ಮೈಸೂರು ಜಿಲ್ಲೆಯ 7 ತಾಲ್ಲೂಕುಗಳ ಗ್ಯಾಸೆಟಿಯರ್ ಸಂಪುಟಗಳು | 2010 | 840 |
| ಕರ್ನಾಟಕ ಕೈಪಿಡಿ (ಕನ್ನಡ) 2011 | 2011 | 450 |
| ಮೈಸೂರು ಗ್ಯಾಸೆಟಿಯರ್ ( 9 ಪುಸ್ತಕಗಳು 5 ಸಂಪುಟಗಳಲ್ಲಿ – ಸಿಡಿ ಸಹಿತ) | 2012 | 3800 |
| ಇಂಪೀರಿಯಲ್ ಗ್ಯಾಸೆಟಿಯರ್ – ಬೀದರ್, ಗುಲಬರ್ಗ ಮತ್ತು ರಾಯಚೂರು ಜಿಲ್ಲಾ ಗ್ಯಾಸೆಟಿಯರ್ ಸಂಪುಟಗಳು | 2012 | 300 (1ಪ್ರತಿಗೆ) |
| ಕೋಲಾರ (ಆಂಗ್ಲ) | 2012 | 700 |
| ಉಡುಪಿ (ಆಂಗ್ಲ) | 2012 | 550 |
| ಗ್ಲಿಂಪ್ಸಸ್ ಆಫ್ ಕರ್ನಾಟಕ | 2012 | 300 |

**ಪ್ರತಿಗಳು ದೊರೆಯುವ ಸ್ಥಳ :**

ಮುಖ್ಯ ಸಂಪಾದಕರ ಕಚೇರಿ, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

ನಿರ್ದೇಶಕರು, ಸರ್ಕಾರಿ ಕೇಂದ್ರ ಪುಸ್ತಕ ಮಳಿಗೆ, ಬಹುಮಹಡಿ ಕಟ್ಟಡ, ಡಾ॥ ಅಂಬೇಡ್ಕರ್ ಬೀದಿ, ಬೆಂಗಳೂರು–1

ಸಹಾಯಕ ನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ, ಸರಸ್ವತಿ ಪುರಂ, ಮೈಸೂರು.

ಉಪನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ, ಪಣಜಿ ರಸ್ತೆ, ಧಾರವಾಡ.

ಉಪನಿರ್ದೇಶಕರು, ಸರ್ಕಾರಿ ಶಾಖಾ ಮುದ್ರಣಾಲಯ, ಗುಲಬರ್ಗ.























# ಕಾಲಗರ್ಭದ ಕೈಸಾಲೆಗಳಲ್ಲಿ ಕರ್ನಾಟಕ ಗ್ಯಾಸೆಟಿಯರ್‌ಗಳ ಧೀಮಂತ ಹೆಜ್ಜೆ

**ಕರ್ನಾಟಕ ಗ್ಯಾಸೆಟಿಯರ್ ಇಲಾಖೆ**
8ನೇ ಮಹಡಿ, ಜಲಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು–560 009
ದೂರವಾಣಿ : 080–22213474, 080–22243293
kargaz@nic.in, karnatakagazetteer@gmail.com, http://www.kar.nic.in/gazetteer




# ಕಾಲಗರ್ಭದ ಕೈಸಾಲೆಗಳಲ್ಲಿ ಕರ್ನಾಟಕ ಗ್ಯಾಸೆಟಿಯರ್‌ಗಳ ಧೀಮಂತ ಹೆಜ್ಜೆ

ಗ್ಯಾಸೆಟಿಯರ್ ಸಂಪುಟಗಳನ್ನು 'ಗೆಜೆಟ್' ಅಥವಾ 'ರಾಜ್ಯಪತ್ರ'ವೆಂದು ಸಾಮಾನ್ಯವಾಗಿ ಭಾವಿಸಲಾಗುತ್ತದೆ. ಆದರೆ, ಗ್ಯಾಸೆಟಿಯರ್ ಹಾಗೂ 'ಗೆಜೆಟ್' ಪದಗಳು ಉತ್ತರ ದಕ್ಷಿಣ ಧೃವಗಳಿದ್ದಂತೆ. ಆಂಗ್ಲ ಭಾಷೆಯಲ್ಲಿ 'ಗೆಜೆಟ್' ಮತ್ತು ' ಗ್ಯಾಸೆಟಿಯರ್' ಪದಗಳು ಒಂದೇ ರೀತಿಯಲ್ಲಿ ಕಂಡುಬರುವಂತೆ ಪದಪ್ರಯೋಗವನ್ನು ಮಾಡಲಾಗುತ್ತದೆ. ಆಂಗ್ಲ ಭಾಷೆಯ 'ಗ್ಯಾಜ' (Gaza) ಎಂಬ ಪದವು ಮೂಲತಃ ಗ್ರೀಕ್ ಭಾಷೆಯದ್ದಾಗಿದ್ದು "ವಾರ್ತೆಗಳ ಖಜಾನೆ" ಎಂಬ ಅರ್ಥದಲ್ಲಿ ಪ್ರಯೋಗವಾಗಿರುವುದು ದಾಖಲೆಗಳಿಂದ ವ್ಯಕ್ತವಾಗುತ್ತದೆ. ಆ ನಂತರದಲ್ಲಿ ಯೂರೋಪಿಯನ್ನರು 'ಗ್ಯಾಸೆಟಿಯರ್' ಎಂಬ ವಿಶಿಷ್ಠ ರೀತಿಯ ಸಂಪುಟಗಳನ್ನು ತಯಾರಿಸಿದಾಗ ಈ ಪದವು ಇಂತಹ ಗ್ರಂಥಗಳಿಗೆ ಅನ್ವರ್ಥನಾಮವಾಗಿ, ಪ್ರಯೋಗಿಸಲ್ಪಟ್ಟಿತು. ಆದರೆ, ಆಂಗ್ಲ ಭಾಷೆಯ 'ಗೆಜೆಟ್' ಆಡಳಿತ ಪ್ರಭುತ್ವವನ್ನು ನಿರ್ವಹಿಸುವವರ ಆದೇಶಗಳು, ಆಜ್ಞೆಗಳು, ಸರಕಾರದ ನಡಾವಳಿಗಳು, ನಿರ್ಣಯಗಳು ಪ್ರಕಟಗೊಳ್ಳುವ ಮಾಧ್ಯಮವಾಗಿ (ರಾಜ್ಯಪತ್ರವಾಗಿ) ಮುಂದುವರೆದು, ಇಂದಿಗೂ ರೂಢಿಯಲ್ಲಿದೆ. ಬ್ರಿಟೀಷರು ಭಾರತದಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಮೇಲೆ ರಾಜ್ಯಗಳಲ್ಲಿದ್ದ ಜಿಲ್ಲೆಗಳ ಪರಿಚಯ ಗ್ರಂಥಗಳನ್ನು ತಯಾರಿಸಿದಾಗ 'ಮ್ಯಾನ್ಯೂಯಲ್' ಎಂಬ ಪದವನ್ನು ಪ್ರಯೋಗಿಸಿದ್ದರೂ, ಆ ಸಂಪುಟಗಳಲ್ಲಿರುವ 'ಪ್ರೇಕ್ಷಣೀಯ ಸ್ಥಳ'ಗಳ ಅಧ್ಯಾಯಕ್ಕೆ 'ಗ್ಯಾಸೆಟಿಯರ್' ಎಂದೇ ಕರೆದಿರುವುದು ಗಮನಾರ್ಹವಾಗಿದೆ. ಹೀಗಾಗಿ, 'ಗ್ಯಾಸೆಟಿಯರ್' ಎಂದರೆ 'ಭೌಗೋಳಿಕ ದೇಶ ಕೋಶ' ವೆಂಬ ಅರ್ಥವೂ ರೂಢಿಯಲ್ಲಿದೆ. ಕಾಲಾನಂತರ ಬ್ರಿಟೀಷರು ತಾವು ಪ್ರಕಟಿಸಿದ ಜಿಲ್ಲಾ ಸಂಪುಟಗಳಿಗೆ 'ಗ್ಯಾಸೆಟಿಯರ್' ಎಂದೇ ಪ್ರಯೋಗಿಸಿದ ಕಾರಣ, ವಿಶ್ವಕೋಶದ ಮಾದರಿಯ ಈ ವಿಶಿಷ್ಟ ಗ್ರಂಥಗಳಿಗೆ ಇದೇ ಅನ್ವರ್ಥನಾಮವಾಗಿ ಇಂದಿಗೂ ಬಳಕೆಯಲ್ಲಿದೆ. ಸ್ವಾತಂತ್ರ್ಯಾನಂತರ ಗ್ಯಾಸೆಟಿಯರ್ ಸಂಪುಟಗಳು ಮತ್ತಷ್ಟು ಪರಿಷ್ಕೃತಗೊಂಡು ಒಂದು ಜಿಲ್ಲೆಯ ವಿವಿಧ ಆಡಳಿತ, ಜನಾಂಗೀಯ, ಸಾಂಸ್ಕೃತಿಕ, ಪ್ರೇಕ್ಷಣೀಯ ಸ್ಥಳಗಳೇ ಮೊದಲಾದ ಆಯಾಮಗಳನ್ನು ಪ್ರತಿಬಿಂಬಿಸುವಲ್ಲಿ ಯಶಸ್ವಿಯಾದುವು.

## ಗ್ಯಾಸೆಟಿಯರ್‌ನ ಸಂಪ್ರದಾಯ

ಕರ್ನಾಟಕಕ್ಕೆ ತನ್ನದೇ ಆದ ವಿಶಿಷ್ಟ ಗ್ಯಾಸೆಟಿಯರ್ ಸಂಪ್ರದಾಯವಿದೆ. ಕರ್ನಾಟಕ ಅದರಲ್ಲೂ ಮೈಸೂರು ಸಂಸ್ಥಾನವು ಬ್ರಿಟೀಷರ ವಶವಾದ ಮೇಲೆ ಅತ್ಯಂತ ದಕ್ಷ ಆಂಗ್ಲ ಹಾಗೂ ಯೂರೋಪಿಯನ್ ಅಧಿಕಾರಿಗಳು ವಿವಿಧ ಇಲಾಖೆಗಳಿಗೆ ನೇಮಕಗೊಂಡು ಸಾರಸ್ವತ ಲೋಕಕ್ಕೆ ತಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸಿರುವರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಥಮ ನಿರ್ದೇಶಕರಾಗಿದ್ದ ಬೆಂಜಮಿನ್ ಲೂಯಿ ರೈಸ್ ಅವರು ಸಂಪಾದಿಸಿದ ಮೈಸೂರು ಗ್ಯಾಸೆಟಿಯರ್ ಸಂಪುಟವನ್ನು ಎರಡು ಭಾಗಗಳಲ್ಲಿ ಮತ್ತು ಕೂರ್ಗ್ ಗ್ಯಾಸೆಟಿಯರ್ ಸಂಪುಟವನ್ನು 1876ರಲ್ಲಿ ಪ್ರಕಟಿಸಿದ್ದು ದೇಶದಲ್ಲಿಯೇ ಉತ್ತಮ ಪ್ರಯತ್ನವೆಂದು ಪರಿಗಣಿಸಲ್ಪಟ್ಟಿದೆ. ಆ ನಂತರ 1881ರಲ್ಲಿ ಇಂಪೀರಿಯಲ್ ಗ್ಯಾಸೆಟಿಯರ್ ಸಂಪುಟಗಳನ್ನು ಸಂಪಾದಿಸಿದ ವಿಲಿಯಮ್ ವಿಲ್ಸನ್ ಹಂಟರ್ ಅವರು ತಮ್ಮ ಪ್ರಥಮ ಸಂಪುಟದ ಮುನ್ನುಡಿಯಲ್ಲಿ ಬಿ.ಎಲ್. ರೈಸ್ ಅವರ ಪರಿಪಕ್ವ ಸಂಪಾದಕತ್ವದ ಬಗ್ಗೆ ವೈಭವಯುತ ವಾಕ್ಯಗಳಲ್ಲಿ ಶ್ಲಾಘಿಸಿರುತ್ತಾರೆ. ತರುವಾಯ ಬಿ.ಎಲ್. ರೈಸ್ ಅವರೇ 1897ರಲ್ಲಿ ಮೈಸೂರು ಗ್ಯಾಸೆಟಿಯರ್ ಸಂಪುಟವನ್ನು ಎರಡು ಭಾಗಗಳಲ್ಲಿ ಪರಿಷ್ಕರಿಸಿ ಪುನಃ ಪ್ರಕಟಿಸಿದರು. ಮೈಸೂರು ಪ್ರಾಂತಕ್ಕೆ ಪ್ರಥಮ ಬಾರಿಗೆ ಎಚ್. ವೆಲ್ಲೆಸ್ಲಿಯರು 1869ರಲ್ಲಿಯೇ ' ಗ್ಯಾಸೆಟಿಯರ್' ಸಂಪುಟವನ್ನು ತಯಾರಿಸಿದ್ದರೆಂದು ರೈಸ್ ಅವರೇ ತಮ್ಮ ಪ್ರಥಮ ಸಂಪುಟದ ಮುನ್ನುಡಿಯಲ್ಲಿ ದಾಖಲಿಸಿರುತ್ತಾರೆ. ಆದರೆ, ಈ ಸಂಪುಟವು ಇಲ್ಲಿಯವರೆಗೂ ನಮಗೆ ದೊರೆತಿಲ್ಲ. ಕೂರ್ಗ್ ಪ್ರಾಂತಕ್ಕೆ ಸಂಬಂಧಿಸಿದ ಗ್ಯಾಸೆಟಿಯರ್ ಸಂಪುಟವನ್ನು ರೆವೆರೆಂಡ್ ಜಿ ರಿಚ್ಟರ್ ಅವರು 1870ರಲ್ಲಿ ಪ್ರಕಟಿಸಿದ್ದರು. ಬೆಳಗಾವಿ, ಬಿಜಾಪುರ, ಧಾರವಾಡ ಮತ್ತು ಕೆನರಾ (ಉತ್ತರ ಕನ್ನಡ) ಜಿಲ್ಲಾ ಗ್ಯಾಸೆಟಿಯರ್ ಸಂಪುಟಗಳನ್ನು ಜೇಮ್ಸ್ ಎಂ. ಕ್ಯಾಂಬೆಲ್ ಅವರು 1883-84ರ ಅವಧಿಯಲ್ಲಿ ಸಂಪಾದಿಸಿ ಪ್ರಕಟಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಮ್ಯಾನ್ಯೂಯಲ್ ಭಾಗ-1 (1894) ಮತ್ತು ಭಾಗ-2 (1895) ಸಂಪುಟಗಳನ್ನು ಜಾನ್ ಸ್ಟರ್ರೋಕ್ ಮತ್ತು ಹೆರಾಲ್ಡ್ ಎ ಸ್ಟೂಯರ್ಟ್ ಅವರು ಕ್ರಮವಾಗಿ ಸಂಪಾದಿಸಿದರು. ಬಳ್ಳಾರಿ ಮ್ಯಾನ್ಯೂಯಲ್ ಸಂಪುಟವನ್ನು ಜಾನ್ ಕೆಲ್‌ಸಾಲ್ ಅವರು 1872ರಲ್ಲಿ ಪ್ರಥಮ ಬಾರಿಗೆ ಸಂಪಾದಿಸಿ ಪ್ರಕಟಿಸಿದರು. ನಂತರ ಬಳ್ಳಾರಿ ಮಾನ್ಯೂಯಲ್‌ನ ಪರಿಷ್ಕೃತ ಸಂಪುಟವನ್ನು ವಿಲಿಯಂ ಫ್ರಾನ್ಸಿಸ್ ಅವರು 1904ರಲ್ಲಿ ಪ್ರಕಟಿಸಿದರು. ನಂತರ 1893ರಲ್ಲಿ ಧಾರವಾಡ, ಬೆಳಗಾವಿ, ವಿಜಾಪುರ ಮತ್ತು ಕೆನರಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಗ್ಯಾಸೆಟಿಯರ್ ಸಂಪುಟಗಳನ್ನು ಸಂಕ್ಷಿಪ್ತಗೊಳಿಸಿ ವೆಂಕಟರಂಗೋ ಕಟ್ಟಿಯವರು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸಿದರು.

ರಾವ್ ಬಹದ್ದೂರ್ ಸಿ. ಹಯವದನರಾವ್ ಅವರು 1930ರ ದಶಕದಲ್ಲಿ ಮೈಸೂರು ಪ್ರಾಂತಕ್ಕೆ ಸಂಬಂಧಿಸಿದಂತೆ (ಎಂಟು ಸಂಪುಟಗಳಲ್ಲಿ) ಗ್ಯಾಸೆಟಿಯರ್‌ಗಳನ್ನು ಅತ್ಯಂತ ಪರಿಶ್ರಮದಿಂದ ಸಂಪಾದಿಸಿ ಪ್ರಕಟಿಸಿದರು. ಸಿ. ಹಯವದನರಾವ್ ಅವರು ಕೈಗೊಂಡ ಆಸಕ್ತಿಯುತ ಕ್ರಮದ ಪರಿಣಾಮವಾಗಿ ಪ್ರಕಟಗೊಂಡ ಗ್ಯಾಸೆಟಿಯರ್ ಸಂಪುಟಗಳಿಂದ ಸ್ಪೂರ್ತಿಪಡೆದು, ಸ್ವಾತಂತ್ರ್ಯೋತ್ತರದಲ್ಲಿ ಕರ್ನಾಟಕ ಸರ್ಕಾರವು 1958ರಲ್ಲಿ ಪ್ರತ್ಯೇಕ ಗ್ಯಾಸೆಟಿಯರ್ ಇಲಾಖೆಯನ್ನು ಆರಂಭಿಸಿತು. ಹೀಗಾಗಿ ಪ್ರಸ್ತುತ ಗ್ಯಾಸೆಟಿಯರ್ ಇಲಾಖೆಯು ಜಿಲ್ಲಾ ಗ್ಯಾಸೆಟಿಯರ್ ಸಂಪುಟಗಳನ್ನು ಹಿಂದಿನ ಸಂಪ್ರದಾಯಕ್ಕನುಗುಣವಾಗಿ ಹೊಸದಾಗಿ ಪ್ರಕಟಿಸುವುದರೊಂದಿಗೆ ಕ್ರಿಯಾಶೀಲವಾಯಿತು.

## ಗ್ಯಾಸೆಟಿಯರ್ ಇಲಾಖೆಯ ಬಗ್ಗೆ

ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯು ತಾತ್ಕಾಲಿಕವಾಗಿ 1958ರಲ್ಲಿ ಅಸ್ತಿತ್ವಕ್ಕೆ ಬಂದು ನೂತನವಾಗಿ ಗ್ಯಾಸೆಟಿಯರ್ ಸಂಪುಟಗಳನ್ನು ಯಶಸ್ವಿಯಾಗಿ ಪ್ರಕಟಿಸುತ್ತಾ ಬಂದಿತು. ನಂತರ ಕರ್ನಾಟಕ ಸರ್ಕಾರವು ಈ ಇಲಾಖೆಯ ಮಹತ್ವವನ್ನು ಮನಗಂಡು 1986ರಲ್ಲಿ ಇಲಾಖೆಯನ್ನು ಖಾಯಂ ಆಧಾರದ ಮೇಲೆ ಮುಂದುವರಿಸಲು ನಿರ್ಧರಿಸಿತು. ಸ್ವಾತಂತ್ರ್ಯೋತ್ತರದಲ್ಲಿ ಇಲಾಖೆಯು ಪ್ರಕಟಿಸಿದ ಜಿಲ್ಲಾ ಗ್ಯಾಸೆಟಿಯರ್ ಸಂಪುಟಗಳ ಸ್ವರೂಪ ಹಾಗೂ ಅಧ್ಯಾಯಗಳ ರೂಪರೇಷೆಗಳು ಕೇಂದ್ರ ಸರ್ಕಾರದ ಗ್ಯಾಸೆಟಿಯರ್ ಘಟಕವು ನಿರೂಪಿಸಿದ ನಿಯಮಾನುಸಾರ ರಚಿತಗೊಂಡವು. ಪ್ರಾರಂಭದಲ್ಲಿ ಗ್ಯಾಸೆಟಿಯರ್ ಇಲಾಖೆಯು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಡಿಯಲ್ಲಿದ್ದು ನಂತರ ವಾರ್ತಾ, ಪ್ರವಾಸೋದ್ಯಮ ಹಾಗೂ ಯುವಜನಸೇವಾ ಇಲಾಖೆಗೆ ವರ್ಗಾಯಿಸಲ್ಪಟ್ಟಿತು. ತರುವಾಯ 1995ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವಾಲಯ ಇಲಾಖೆಗೆ ಪುನಃ ವರ್ಗಾಯಿಸಲ್ಪಟ್ಟು ಈಗ ಅದರ ಅಧೀನದಲ್ಲಿಯೇ ಕಾರ್ಯನಿರ್ವಹಿಸುತ್ತಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಪ್ರತಿಭಾವಂತ ವಿದ್ವಾಂಸರುಗಳನ್ನೊಳಗೊಂಡ ರಾಜ್ಯಮಟ್ಟದ ಸಲಹಾ ಸಮಿತಿಯ ಮಾರ್ಗದರ್ಶನದಲ್ಲಿ ಗ್ಯಾಸೆಟಿಯರ್ ಸಂಪುಟಗಳು ಪ್ರಕಟಗೊಳ್ಳುತ್ತಿವೆ.

## ಇಲಾಖಾ ಪ್ರಕಟಣೆಗಳು

ಇಲಾಖೆಯು ಸ್ಥಾಪಿತಗೊಂಡ ತಕ್ಷಣ ಸಮಗ್ರ ಜಿಲ್ಲಾ ಗ್ಯಾಸೆಟಿಯರ್ ಪ್ರಕಟಣೆಯ ಯೋಜನೆಯನ್ನು ಆರಂಭಿಸಿ ಆಂಗ್ಲ ಭಾಷೆಯಲ್ಲಿ ಎಲ್ಲಾ 20 ಜಿಲ್ಲೆಗಳ ಗ್ಯಾಸೆಟಿಯರ್ ಸಂಪುಟಗಳ ಪ್ರಕಟಣಾ ಕಾರ್ಯಗಳನ್ನು ಯಶಸ್ವಿಯಾಗಿ 1990ರಲ್ಲಿ ಪೂರ್ಣಗೊಳಿಸಿತು. ಅಲ್ಲದೇ, ರಾಜ್ಯ ಗ್ಯಾಸೆಟಿಯರ್ ಅನ್ನು ಎರಡು ಭಾಗ (ಆಂಗ್ಲ) ಮತ್ತು ಮೂರು ಭಾಗ (ಕನ್ನಡ) ಗಳಲ್ಲಿ 1982-84ರ ನಡುವೆ ಪ್ರಥಮ ಬಾರಿಗೆ ಪ್ರಕಟಿಸಿದ ಹೆಗ್ಗಳಿಕೆಗೆ ಕರ್ನಾಟಕವು ಪಾತ್ರವಾಯಿತು. ಈ ಯೋಜನೆಯಡಿಯಲ್ಲಿ ಆಂಗ್ಲ ಆವೃತ್ತಿಗಳಿಗೆ ಮಾತ್ರ ಕೇಂದ್ರ ಸರ್ಕಾರವು ಆರ್ಥಿಕ ಸಹಾಯ ನೀಡಿತ್ತು. ಇದಕ್ಕೆ ಪೂರಕವಾಗಿ ದಶವಾರ್ಷಿಕ ಪುರವಣಿಯನ್ನು ಎರಡೂ ಭಾಷೆಗಳಲ್ಲಿ ಪ್ರಕಟಿಸಲಾಗಿದೆ. ಇಲಾಖೆಯು 1992ರಿಂದ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪರಿಷ್ಕೃತಗೊಳಿಸಿ ಕೇಂದ್ರ ಮಾದರಿಗೆ ಬದಲಾಗಿ ಅಧ್ಯಾಯಗಳನ್ನು ಪುನರ್‌ವಿಂಗಡಿಸಿ ವಿಶಿಷ್ಟ ಆಯಾಮಗಳನ್ನು ಹೊಂದಿರುವಂತೆ ರೂಪಿಸಿ ಪ್ರಕಟಿಸುವ ವಿನೂತನ ಯೋಜನೆಯನ್ನು ಆರಂಭಿಸಿತು. ಈ ಯೋಜನೆಯಂತೆ ಕನ್ನಡ ಭಾಷೆಯಲ್ಲಿ ಕೊಡಗು, ಧಾರವಾಡ, ಗುಲಬರ್ಗಾ, ವಿಜಾಪುರ, ಮಂಡ್ಯ, ಕೋಲಾರ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸಿದೆ.

ಸಲಹಾ ಸಮಿತಿಯ ನಿರ್ಣಯಾನುಸಾರ ಈ ಪರಿಷ್ಕೃತ ಜಿಲ್ಲಾ ಸಂಪುಟಗಳನ್ನು ಆಂಗ್ಲ ಭಾಷೆಗೆ ಭಾಷಾಂತರಿಸುವ ಕಾರ್ಯವನ್ನು ಇಲಾಖೆಯು ಕೈಗೆತ್ತಿಕೊಂಡಿದ್ದು ಈವರೆಗೆ ಕೊಡಗು, ಧಾರವಾಡ, ಗುಲಬರ್ಗಾ, ಬಿಜಾಪುರ, ಮಂಡ್ಯ, ಕೋಲಾರ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲಾ ಗ್ಯಾಸೆಟಿಯರ್‌ಗಳ ಆಂಗ್ಲ ಆವೃತ್ತಿಗಳನ್ನೂ ಪ್ರಕಟಿಸಲಾಗಿದೆ. ಪ್ರಸ್ತುತ ಚಾಲ್ತಿಯಲ್ಲಿರುವ ಯೋಜನೆಯಡಿಯಲ್ಲಿ ಜಿಲ್ಲಾ ಗ್ಯಾಸೆಟಿಯರ್‌ಗಳ ಪರಿಷ್ಕೃತ ಸಂಪುಟಗಳನ್ನು ಪ್ರಕಟಗೊಳಿಸುವುದರ ಜೊತೆಗೆ, ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟಗೊಂಡಿರುವ ಕರ್ನಾಟಕದ ಹಳೆಯ ಹಾಗೂ ಶಿಥಿಲವಾದ ಜಿಲ್ಲಾ ಗ್ಯಾಸೆಟಿಯರ್/ಮ್ಯಾನ್ಯೂಯಲ್‌ಗಳನ್ನು ಆಧುನಿಕ ಕಂಪ್ಯೂಟರ್ ತಂತ್ರಜ್ಞಾನದ ಸಹಾಯದಿಂದ ಸ್ಕ್ಯಾನ್ ಮಾಡಿ ಪುನರ್ ಮುದ್ರಿಸುವ ಯೋಜನೆಯನ್ನೂ ಇಲಾಖೆಯು ಹಮ್ಮಿಕೊಂಡಿದೆ. ಈ ಯೋಜನೆಯಡಿಯಲ್ಲಿ ಜೇಮ್ಸ್ ಕ್ಯಾಂಬೆಲ್ ಸಂಪಾದಿಸಿರುವ ಬಿಜಾಪುರ, ಧಾರವಾಡ, ಕೆನರಾ, ಬೆಳಗಾಂ; ಜಾನ್ ಸ್ಟರ್ರೋಕ್ ಮತ್ತು ಹೆರಾಲ್ಡ್ ಎ. ಸ್ಟೂಯರ್ಟ್ ಸಂಪಾದಿಸಿರುವ ಸೌತ್ ಕೆನರಾ, ಕೆಲ್ಸಾಲ್ ಸಂಪಾದಿಸಿರುವ ಬಳ್ಳಾರಿ, ಬಿ.ಎಲ್. ರೈಸ್ ಸಂಪಾದಿತ ಮೈಸೂರು ಗ್ಯಾಸೆಟಿಯರ್ (ಎರಡು ಸಂಪುಟ) ಹಾಗೂ ಮೈಸೂರು ಆ್ಯಂಡ್ ಕೂರ್ಗ್, ಸಿ. ಹಯವದನ ರಾವ್ ಸಂಪಾದಿತ ಮೈಸೂರು ಗ್ಯಾಸೆಟಿಯರ್ (ಐದು ಸಂಪುಟಗಳು) ಗ್ಯಾಸೆಟಿಯರ್‌ಗಳನ್ನು ಪ್ರಕಟಿಸಲಾಗಿದೆ. ಅಲ್ಲದೆ ಬುಕಾನನ್ ವರದಿಯನ್ನು ಪುನರ್ ಮುದ್ರಿಸಲಾಗಿದೆ.

ಇಲಾಖೆಯ ವಿಶೇಷ ಪ್ರಕಟಣೆಯಾಗಿ 1995ರಲ್ಲಿ ಪ್ರಕಟಗೊಂಡ A Hand Book of Karnataka ನಾಲ್ಕನೆಯ ಆವೃತ್ತಿಯನ್ನು ಕಂಡಿದೆ. ಇದರ ಕನ್ನಡ ಆವೃತ್ತಿಯಾದ "ಕರ್ನಾಟಕ ಕೈಪಿಡಿ" ಎರಡನೆಯ ಆವೃತ್ತಿಯನ್ನು (2011) ಕಂಡಿದೆ. ಇಲಾಖೆಯು ಪ್ರಾಯೋಗಿಕ ಯೋಜನೆಯಡಿ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ತಾಲೂಕುವಾರು ಗ್ಯಾಸೆಟಿಯರ್‌ಗಳನ್ನು ಪ್ರಕಟಿಸಿದೆ. ಅಲ್ಲದೆ ವಿಶೇಷ ಪ್ರಕಟಣೆಯಾಗಿ "ಗ್ಲಿಂಪ್ಸಸ್ ಆಫ್ ಕರ್ನಾಟಕ" ಗ್ರಂಥವನ್ನು 2012ರಲ್ಲಿ ಪ್ರಕಟಿಸಿದೆ. ಇಲಾಖೆಯ ಪ್ರಕಟಣೆಗಳ ಪಟ್ಟಿಯನ್ನು ಹಿಂಬದಿಯಲ್ಲಿ ನೀಡಲಾಗಿದೆ.

ನೀಲಾ ಮಂಜುನಾಥ, ಕ.ಆ.ಸೇ.
ಮುಖ್ಯ ಸಂಪಾದಕರು, ಕರ್ನಾಟಕ ಗ್ಯಾಸೆಟಿಯರ್